# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916.

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406
ಮೈಸೂರು–570 005

ದಿನಾಂಕ: 04 –01–2025

ಸಂಖ್ಯೆ:ಡಿವಿ8/166/ಸುತ್ತೋಲೆ/2018–19

## ಸುತ್ತೋಲೆ

ವಿಷಯ: "ಸಂಶೋಧನಾ ವಿಧಾನ" (Research Methodology) ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ, ಹಳಿಯಾಳ ರಸ್ತೆ, ಧಾರವಾಡ ಇವರ ಪತ್ರ ಸಂಖ್ಯೆ: ಕರಾಉಶಿಅಧಾ/ಸಂಶೋಧನಾ ವಿಧಾನ–4/24–25, ದಿನಾಂಕ:02–01–2025

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ, ಹಳಿಯಾಳ ರಸ್ತೆ, ಧಾರವಾಡ ಇವರು ಉಲ್ಲೇಖಿತ ಪತ್ರದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪಿಎಚ್.ಡಿ ಪದವಿಗೆ ನೋಂದಾಯಿಸಿಕೊಂಡ ಸಮಾಜ ವಿಜ್ಞಾನ ನಿಕಾಯದ ಸಂಶೋಧನಾ ವಿದ್ಯಾರ್ಥಿಗಳಿಗಾಗಿ ದಿನಾಂಕ:20–01–2025 ರಿಂದ 26–01–2025 ರವರೆಗೆ ಅಕಾಡೆಮಿಯಲ್ಲಿ "ಸಂಶೋಧನಾ ವಿಧಾನ" (Research Methodology) ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿರುವುದಾಗಿ ತಿಳಿಸಿರುತ್ತಾರೆ (ಪತ್ರದ ಪ್ರತಿ ಲಗತ್ತಿಸಿದೆ). ಈ ಸಂಬಂಧ ಸದರಿ ವಿಷಯವನ್ನು ತಮ್ಮ ವಿಭಾಗ/ ಕಾಲೇಜಿನಲ್ಲಿ ಸಂಶೋಧನೆ ನಡೆಸುತ್ತಿರುವ ಅಭ್ಯರ್ಥಿಗಳ ತರಬೇಕೆಂದು ತಿಳಿಸಲಾಗಿದೆ. ಸದರಿ ವಿಷಯದ ಬಗೆಗಿನ ಹೆಚ್ಚಿನ ಮಾಹಿತಿಗಾಗಿ ತರಬೇತಿ ಕಾರ್ಯಕ್ರಮದ ಸಂಯೋಜಕರಾದ ಡಾ.ಮಲ್ಲಿಕಾರ್ಜುನ ಮೂಲಿಮನಿ (ಮೊಬೈಲ್ ನಂ.9901871972) ಇವರನ್ನು ಹಾಗೂ heacademy2015@gmail.com ಅನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ.

ಕುಲಸಚಿವ
ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಇವರಿಗೆ:

1. ಅಧ್ಯಕ್ಷರು, ಸಮಾಜಶಾಸ್ತ್ರ/ಮಾನವಶಾಸ್ತ್ರ/ಭೂಗೋಳಶಾಸ್ತ್ರ/ಸಮಾಜಕಾರ್ಯ/ರಾಜ್ಯಶಾಸ್ತ್ರ/ಸಾರ್ವಜನಿಕ ಆಡಳಿತ/ಇತಿಹಾಸ/ ಅರ್ಥಶಾಸ್ತ್ರ & ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಪ್ರಾಂಶುಪಾಲರು, ಯುವರಾಜ/ಮಹಾರಾಜ/ಲಲಿತಾ ಕಲಾ ಮತ್ತು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.
3. ಸಂಯೋಜಕರು, ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು – ಸದರಿ ಮಾಹಿತಿಯನ್ನು ಲಗತ್ತಿಸಿರುವ ಅಡಕಗಳೊಂದಿಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಹಾಗೂ ಸುಶಾಸನದ (Good Governence) ಕ್ರಮ ಸಂಖ್ಯೆ 26ರಲ್ಲಿ ಅಪ್‌ಲೋಡ್ ಮಾಡಲು ಸೂಕ್ತ ಕ್ರಮಕೈಗೊಳ್ಳಲು ಕೋರಲಾಗಿದೆ.
4. ಕಛೇರಿ ಪ್ರತಿ.

Mr. Karthik to attend
06/01

ಕರ್ನಾಟಕ ಸರಕಾರ

# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ,

ಹಳಿಯಾಳ ರಸ್ತೆ, ಧಾರವಾಡ-580003.

ಸಂಖ್ಯೆ : ಕರಾಉಶಿಅಧಾ/ಸಂಶೋಧನಾ ವಿಧಾನ-4/2024-25/

ದಿನಾಂಕ: 02.01.2025

ಗೆ,

The Registrar
Mysore University,Crawford Hall,
VISHWAVIDYANILAYA KARYA SOUDHA,
K.G Koppal, Saraswathipuram,
Mysuru, Karnataka 570005

ಮಾನ್ಯರೇ,

**ವಿಷಯ:** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ ಧಾರವಾಡವು ನಡೆಸಲಿರುವ "ಸಂಶೋಧನಾ ವಿಧಾನ"ಗಳ (Research Methodology) ಕುರಿತು 07 ದಿನಗಳ ತರಬೇತಿಗೆ ಸಂಶೋಧನಾ ವಿದ್ಯಾರ್ಥಿಗಳನ್ನು ಕಳುಹಿಸುವ ಕುರಿತು.

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ ಧಾರವಾಡವು ದಿ:20.01.2025 ರಿಂದ ದಿ: 26.01.2025ರ ವರೆಗೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪಿ.ಎಚ್‌ಡಿ., ಪದವಿಗೆ ನೋಂದಾಯಿಸಿಕೊಂಡ ಸಮಾಜ ವಿಜ್ಞಾನ (Social Science) ನಿಕಾಯದ ಸಂಶೋಧನಾ ವಿದ್ಯಾರ್ಥಿಗಳಿಗೆ "ಸಂಶೋಧನಾ ವಿಧಾನ" (Research Methodology) ಕುರಿತು 07 ದಿನಗಳ ತರಬೇತಿಯನ್ನು ಆಯೋಜಿಸಿದೆ. ಅರೆಕಾಲಿಕ ಹಾಗೂ ಪೂರ್ಣ ಕಾಲಿಕ ಸಂಶೋಧನಾ ವಿದ್ಯಾರ್ಥಿಗಳು ಈ ತರಬೇತಿಯಲ್ಲಿ ಭಾಗವಹಿಸಬಹುದು. ರಾಜ್ಯದ ಹಾಗೂ ದೇಶದ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಚಟುವಟಿಕೆ ಆಧಾರಿತ ತರಬೇತಿಯನ್ನು ನೀಡಲಾಗುವುದು. ಒಂದು ಬ್ಯಾಚ್‌ನಲ್ಲಿ 40 ಜನ ಶಿಬಿರಾರ್ಥಿಗಳಿಗೆ ಭಾಗವಹಿಸಲು ಅವಕಾಶವಿರುತ್ತದೆ.

ತರಬೇತಿಗೆ ಆಯ್ಕೆಯಾದ ಶಿಬಿರಾರ್ಥಿಗಳಿಗೆ ಓಓಡಿ ಸೌಲಭ್ಯವಿರುತ್ತದೆ. ಅಕಾಡೆಮಿಯಲ್ಲಿ ಅಭ್ಯರ್ಥಿಗಳಿಗೆ 07 ದಿನಗಳ ಕಾಲ ಉಚಿತ ಊಟ ಹಾಗೂ ವಸತಿ ವ್ಯವಸ್ಥೆಯು ಲಭ್ಯವಿರುತ್ತದೆ, ಮಧ್ಯದಲ್ಲಿ ರಜೆಯ ಸೌಲಭ್ಯವಿರುವುದಿಲ್ಲ.

ಆದುದರಿಂದ ತಮ್ಮ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನ (Social Science) ನಿಕಾಯದ ಬೇರೆ ಬೇರೆ ವಿಷಯಗಳಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ನೋಂದಾಯಿತ ಸಂಶೋಧನಾ ವಿದ್ಯಾರ್ಥಿಗಳನ್ನು ಮೆರಿಟ್ ಕಂ ರೋಸ್ಟರ್ ನೆಲೆಯಲ್ಲಿ ಆಯ್ಕೆ ಮಾಡಿ ಈ ಕೆಳಗಿನ ಗೂಗಲ್ ಫಾರ್ಮ್ ಲಿಂಕ್ ಮುಖಾಂತರ ಹೆಸರು ನೋಂದಾಯಿಸಲು ಸೂಚಿಸಬೇಕೆಂದು ವಿನಂತಿ. ದಿ:10.01.2025 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಯೋಜಕರಾದ ಡಾ.ಮಲ್ಲಿಕಾರ್ಜುನ ಎನ್. ಮೂಲಿಮನಿ, ಮೊಬೈಲ್ ಸಂಖ್ಯೆ: 9901871972 ಇವರನ್ನು ಸಂಪರ್ಕಿಸಲು ಕೋರಿದೆ.

ಧನ್ಯವಾದಗಳೊಂದಿಗೆ,

Google Form: https://forms.gle/f3HYDX1Nx889aZux6

ತಮ್ಮ ವಿಶ್ವಾಸಿ,

ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ
ಹಳಿಯಾಳ ರಸ್ತೆ, ಧಾರವಾಡ-580003

ಮಿಂಚಂಚೆ: heacademy2015@gmail.com ದೂರವಾಣಿ ಸಂಖ್ಯೆ. 0836-2008581